(ಇಂದು ದಿನಾಂಕಃ 06-03-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ಆರ್.ಎಸಿ.ಎಚ್.(ಜಿ) ವಕೀಲರಿಂದಃ**

ನಾನು 25-30 ವರ್ಷಗಳಿಂದ ಹಾರವಾಡದಲ್ಲಿ ವಾಸಿಸುತ್ತಿದ್ದೇನೆ.ನನ್ನ ಜಮೀನು ವ್ಯವಹಾರ ಹಾಗೂ ವಾದಿಯರ ಕುಟುಂಬದ ಜಮೀನು ವ್ಯವಹಾರ ಬೇರೆ ಬೇರೆ ಎಂದರೆ ಸರಿ. ವಾದಿಯರ ಎಷ್ಟು ಜಮೀನು ಭೂಸ್ವಾಧೀನ ಆಗಿತ್ತು ಹಾಗೂ ಎಷ್ಟು ಪರಿಹಾರ ಹಣ ಬಂದಿತ್ತು ಎಂದು ನನಗೆ ಮಾಹಿತಿ ಇಲ್ಲ. ಭೂಸ್ವಾಧೀನವಾದ ಜಮೀನು ಯಾರ ಹೆಸರಿನಲ್ಲಿ ಇತ್ತು ಹಾಗೂ ಅದು ಯಾರಿಂದ ಬಂದಿತ್ತು ಎಂದು ನನಗೆ ಮಾಹಿತಿ ಇಲ್ಲ. ಪ್ರಮಾಣಪತ್ರದಲ್ಲಿರುವ ವಿಷಯಗಳನ್ನು ವಾದಿಯರು ಹೇಳಿ ಬರೆಸಿದ್ದಾರೆ ಎಂದರೆ ಸರಿ. ವಾದಿಯ ಗಂಡನ ಬಗ್ಗೆ ಹಾಗೂ ಜಮೀನಿನ ಬಗ್ಗೆ ಹಾಗೂ ಪರಿಹಾರ ಹಣದ ಬಗ್ಗೆ ನನಗೆ ಏನೂ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಗಂಡನಿಗೆ ಸಿಗಬೇಕಾದ ಪಾಲಿನ ಬಗ್ಗೆ ಕೇಳಿ ದಾವೆ ಹಾಕಿದ್ದಾರೆ. ಯಾವ ಇಸ್ವಿಯಲ್ಲಿ ದಾವೆ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿ ಮತ್ತು ಅವರ ಗಂಡನ ವಿರುದ್ಧ ಬೇರೆ ಯಾವುದಾದರೂ ಕೇಸು ಇರುವ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯರು ಅವರ ಗಂಡನ ಸಹೋದರರ ವಿರುದ್ಧ ದಾವೆ ಹಾಕಿದ್ದಾರೆ. ವಾದಿಯರ ಕೋರಿಕೆಯ ಮೇರೆಗೆ ಅವರಿಗೆ ಸಹಾಯ ಆಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ವಾದಿಯ ಗಂಡ ಮತ್ತು ನನ್ನ ಮಧ್ಯೆ ಯಾವುದೇ ಮಾತುಕತೆಯಾಗಿಲ್ಲ ಎಂದರೆ ಸರಿಯಲ್ಲ. ವಾದಿಯರ ಅನುಕೂಲಕ್ಕಾಗಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಕಾರವಾರ